# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಶಸ್ತ್ರ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಆರ್.ಎಸ್.ಐ) ಹುದ್ದೆಗಳನ್ನು ಸಶಸ್ತ್ರ, ಪೊಲೀಸ್ ಇನ್ಸ್‌ಪೆಕ್ಟರ್ (ಆರ್.ಪಿ.ಐ) ಹುದ್ದೆಗೆ ಮೇಲ್ದರ್ಜೆಗೇರಿಸುವ ಕುರಿತು.

**ಓದಲಾಗಿದೆ:**

(1) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 180 ಪಿಓಪಿ 2017, ದಿನಾಂಕ: 30/01/2018.
(2) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 109 ಪಿಓಪಿ 2018, ದಿನಾಂಕ: 07/12/2018.
(3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಇವರ ಪತ್ರ ಸಂಖ್ಯೆ: ಪಿ&ಸಿ(6)13/2025-26, ದಿನಾಂಕ: 23/07/2025.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಮೇಲುಸ್ತುವಾರಿಯನ್ನು ಸಮರ್ಪಕವಾಗಿ ನಿರ್ವಹಿಸುವ ಸಲುವಾಗಿ ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಮೈಸೂರು, ಹಾಸನ, ಚಾಮರಾಜನಗರ, ಮಂಡ್ಯ, ದಾವಣಗೆರೆ, ಉತ್ತರ ಕನ್ನಡ, ಉಡುಪಿ, ಗದಗ, ಬಾಗಲಕೋಟೆ ಮತ್ತು ಯಾದಗಿರಿ ಹೀಗೆ ಒಟ್ಟು 13 ಜಿಲ್ಲೆಗಳಲ್ಲಿ ಮಂಜೂರಾಗಿರುವ 02 ಆರ್.ಪಿ.ಐ. ಹುದ್ದೆಗಳ ಪೈಕಿ, ಖಾಯಂ ಆಗಿ ಮಂಜೂರಾಗಿರುವ 01 ಆರ್.ಪಿ.ಐ. ಹುದ್ದೆ ಅಂದರೆ ಒಟ್ಟು 13 ಆರ್.ಪಿ.ಐ. ಹುದ್ದೆಗಳನ್ನು (ವೇತನ ಶ್ರೇಣಿ ರೂ.21,600-40,050) ಡಿ.ವೈ.ಎಸ್.ಪಿ. (ಸಶಸ್ತ್ರ) ಹುದ್ದೆಗಳಿಗೆ (ವೇತನ ಶ್ರೇಣಿ ರೂ.28,100-50,100) ಉನ್ನತೀಕರಿಸಿ, ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ, ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಮೇಲುಸ್ತುವಾರಿಯನ್ನು ಸಮರ್ಪಕವಾಗಿ ನಿರ್ವಹಿಸುವ ಸಲುವಾಗಿ ಹಾವೇರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಮಂಜೂರಾಗಿರುವ 02 ಆರ್.ಪಿ.ಐ. ಹುದ್ದೆಗಳ ಪೈಕಿ, ಖಾಯಂ ಆಗಿ ಮಂಜೂರಾಗಿರುವ ತಲಾ 01 ಆರ್.ಪಿ.ಐ. ಹುದ್ದೆಗಳನ್ನು (ಹಳೆಯ 2012ರ ವೇತನ ಶ್ರೇಣಿ ರೂ.21,600-40,500) ಡಿ.ವೈ.ಎಸ್.ಪಿ. (ಸಶಸ್ತ್ರ) ಹುದ್ದೆಗಳಿಗೆ (ಹಳೆಯ 2012ರ ವೇತನ ಶ್ರೇಣಿ ರೂ.28,100-50,100) ಉನ್ನತೀಕರಿಸಿ, ಆದೇಶಿಸಲಾಗಿದೆ.

ಮೇಲೆ ಓದಲಾದ (3)ರ ಪತ್ರದಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸಶಸ್ತ್ರ ಮೀಸಲು ಪೊಲೀಸ್ ಘಟಕವು ಗಣ್ಯ ವ್ಯಕ್ತಿಗಳ ಭದ್ರತೆ, ಕಾನ್ವಾಯ್/ಎಸ್ಕಾರ್ಟ್ ಉಸ್ತುವಾರಿ, ಕಾನೂನು ಸುವ್ಯವಸ್ಥೆ ಪಾಲನೆಯಲ್ಲಿ ಸಿವಿಲ್ ಪೊಲೀಸ್‌ರಿಗೆ ನೆರವು, ವಿಪತ್ತು ನಿರ್ವಹಣೆ, ಪೊಲೀಸ್ ಶ್ವಾನದಳ, ಎಎಸ್ ತಂಡಗಳ ನಿರ್ವಹಣೆ ಮತ್ತು ಪೊಲೀಸ್ ವಾಹನಗಳ ನಿರ್ವಹಣೆ ಸೇರಿದಂತೆ ಮಹತ್ವಪೂರ್ಣ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದು, ಜಿಲ್ಲಾ ಸಶಸ್ತ್ರ ಮೀಸಲು ಪಡೆಗಳ ಸೂಕ್ತ ಮೇಲ್ವಿಚಾರಣೆಗಾಗಿ ಕೆಳಕಂಡ ಜಿಲ್ಲೆಗಳಲ್ಲಿ 02-ಆರ್.ಪಿ.ಐ. ಹುದ್ದೆಗಳ ಮಂಜೂರಾತಿ ಬಲದಲ್ಲಿ 01-ಆರ್.ಪಿ.ಐ. ಹುದ್ದೆಯನ್ನು ಸರ್ಕಾರದ ಆದೇಶ ದಿನಾಂಕ: 30/01/2018 ಮತ್ತು 07/12/2018ರನ್ವಯ ಡಿ.ವೈ.ಎಸ್.ಪಿ. (ಸಶಸ್ತ್ರ) ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು ತಿಳಿಸಿರುತ್ತಾರೆ.

| ಕ್ರ.ಸಂ | ಘಟಕ | ಕ್ರ.ಸಂ | ಘಟಕ |
|---|---|---|---|
| 1. | ಬಾಗಲಕೋಟೆ | 2. | ಚಾಮರಾಜನಗರ |
| 3. | ಚಿಕ್ಕಬಳ್ಳಾಪುರ | 4. | ದಾವಣಗೆರೆ |
| 5. | ಗದಗ | 6. | ಹಾಸನ |
| 7. | ಹಾವೇರಿ | 8. | ಕೋಲಾರ |
| 9. | ಕೊಪ್ಪಳ | 10. | ಮಂಡ್ಯ |
| 11. | ಮೈಸೂರು | 12. | ರಾಮನಗರ |
| 13. | ಉಡುಪಿ | 14. | ಉತ್ತರ ಕನ್ನಡ |
| 15. | ಯಾದಗಿರಿ | | |

ಜಿಲ್ಲಾ, ಸಶಸ್ತ್ರ ಪಡೆಗಳ ಕಾರ್ಯನಿರ್ವಹಣೆಯಲ್ಲಿ Chain of Command ಮೂಲಕ ಡಿ.ವೈ.ಎಸ್.ಪಿ. ಸಶಸ್ತ್ರ ಮತ್ತು ಆರ್.ಪಿ.ಐ. ವೃಂದಗಳ ಅಧಿಕಾರಿಗಳ ನಡುವೆ ಹೆಚ್ಚಿನ ಸಮನ್ವಯ ಹಾಗೂ ಮಾರ್ಗದರ್ಶನ ನೀಡುವ ಅಗತ್ಯತೆ ಇದ್ದು, ಡಿ.ವೈ.ಎಸ್.ಪಿ. ಮತ್ತು ಅರ್.ಪಿ.ಐ. ವೃಂದಗಳಲ್ಲಿ 01-ಡಿ.ವೈ.ಎಸ್.ಪಿ. ಸಶಸ್ತ್ರ ಹುದ್ದೆಗೆ ಆಡಳಿತಾತ್ಮಕ ಹಾಗೂ ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಅನುಪಾತಸಾರವಾಗಿ 02-ಆರ್.ಪಿ.ಐ. ಹುದ್ದೆ ಕಾರ್ಯನಿರ್ವಹಿಸುತ್ತಿದ್ದಲ್ಲಿ ದಿನನಿತ್ಯದ ಕಾನೂನು ಸುವ್ಯವಸ್ಥೆ ಕರ್ತವ್ಯಗಳಿಗೆ ಯಾವುದೇ ಅಡಚಣೆ ಉಂಟಾಗದಂತೆ ಅಧೀನ ಅಧಿಕಾರಿಗಳಿಂದ ಹಿರಿಯ ಅಧಿಕಾರಿಗಳು ಹಾಗೂ ಸಾರ್ವಜನಿಕರ ನಿರೀಕ್ಷಿತ ಮಟ್ಟದಲ್ಲಿ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಲು ಸಹಕಾರಿಯಾಗುತ್ತದೆ ಎಂದು ಹಾಗೂ ಜಿಲ್ಲಾ, ಸಶಸ್ತ್ರ, ಮೀಸಲು ಘಟಕಗಳಲ್ಲಿ ಆರ್.ಪಿ.ಐ ಹುದ್ದೆ ಪ್ರಮುಖ ಕಾರ್ಯಕಾರಿ ಹುದ್ದೆಯಾಗಿದೆ ಎಂದು ತಿಳಿಸಿರುತ್ತಾರೆ.

ಮೇಲಿನ ತಃಖ್ತೆಯಲ್ಲಿ ವಿವರಿಸಿರುವ ಜಿಲ್ಲೆಗಳ ಮೀಸಲು ಪಡೆಯ ಮಂಜೂರಾತಿ ಬಲದಿಂದ 01-ಆರ್.ಎಸ್.ಐ. ಹುದ್ದೆಯನ್ನು 01-ಆರ್.ಪಿ.ಐ. ಹುದ್ದೆಯನ್ನಾಗಿ ಅಂದರೆ ಒಟ್ಟು 15 ಹುದ್ದೆಗಳನ್ನು ಮೇಲ್ದರ್ಜೆಗೇರಿಸುವಂತೆ ಹಾಗೂ ಪ್ರಸ್ತುತ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 4,746 ಪೊಲೀಸ್ ವಾಹನಗಳಿದ್ದು, ಇವುಗಳ ನಿರ್ವಹಣೆ, ನೊಂದಣಿ, ವಿಮೆ ಮತ್ತು ದುರಸ್ತಿ ಕಾರ್ಯಗಳನ್ನು ಸಿವಿಲ್ ಪೊಲೀಸ್ ಅಧಿಕಾರಿಗಳು ನಿರ್ವಹಿಸುತ್ತಿದ್ದು, ಆದರೆ ಸದರಿಯವರ ದಿನನಿತ್ಯದ ಕರ್ತವ್ಯಗಳಾದ ಪೊಲೀಸ್ ಠಾಣೆಯ ಕರ್ತವ್ಯಗಳು, ಕಾನೂನು ಮತ್ತು ಸುವ್ಯವಸ್ಥೆ/ಅಪರಾಧ/ಸಂಚಾರ/ವಿಶೇಷ ಕರ್ತವ್ಯಗಳು ಮತ್ತು ಇತರ ಕಾರ್ಯಗಳ ಜೊತೆ ತಾಂತ್ರಿಕ ಪರಿಣತಿ ಹಾಗೂ ಅನುಭವದ ಕೊರತೆ ಇರುವುದರಿಂದ ಮೋಟರ್ ವಾಹನ ಅಧಿಕಾರಿಯಾಗಿ ತಾಂತ್ರಿಕವಾಗಿ ಕರ್ತವ್ಯ ನಿರ್ವಹಿಸುವುದು ಕಷ್ಟವಾಗುತ್ತದೆಂದು ತಿಳಿಸಿರುತ್ತಾರೆ.

ಮೋಟಾರ್ ಸಾರಿಗೆ ಅಧಿಕಾರಿಯಾಗಿ (ಎಂ.ಟಿ.ಓ) ಹುದ್ದೆಗಳಿಗೆ ಸಶಸ್ತ್ರ, ಇನ್ಸ್‌ಪೆಕ್ಟರ್ (ಆರ್.ಪಿ.ಐ.) ಮಟ್ಟದ ಅಧಿಕಾರಿಗಳನ್ನು ನೇಮಿಸಬೇಕಿದ್ದು, ಸಶಸ್ತ್ರ, ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳ ಕೊರತೆಯಿಂದಾಗಿ ಪ್ರಸ್ತುತ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಎಂ.ಟಿ.ಓ ಹುದ್ದೆಯಲ್ಲಿ ಆರ್.ಎಸ್.ಐ. ದರ್ಜೆಯ ಅಧಿಕಾರಿಗಳು ಎ.ಎಂ.ಟಿ.ಓ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆಂದು ಹಾಗೂ ಸದರಿ ಹುದ್ದೆಗಳನ್ನು ಸಶಸ್ತ್ರ, ಇನ್ಸ್‌ಪೆಕ್ಟರ್ ಆರ್.ಪಿ.ಐ. ಹುದ್ದೆಗಳನ್ನಾಗಿ ಉನ್ನತೀಕರಿಸಿದಲ್ಲಿ, ಬೆಂಗಳೂರು ನಗರದ ಎಲ್ಲಾ ವಿಭಾಗಗಳಿಗೆ ಸಂಬಂಧಿಸಿದ ವಾಹನಗಳ ನಿರ್ವಹಣೆ ಕುರಿತಾದ ನೊಂದಣಿ, ವಿಮೆ, ಜನರಲ್ ಸರ್ವಿಸ್, ದುರಸ್ತಿ ನಿರ್ವಹಣೆ ಮತ್ತು ಇತರ ಕಾರ್ಯಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿದೆಂದು ಹಾಗೂ ಈ ಕ್ರಮದಿಂದ ಸಿವಿಲ್ ಪೊಲೀಸರ ಕಾರ್ಯಭಾರ ಕಡಿಮೆಯಾಗಲಿದೆ ಎಂದು ತಿಳಿಸಿರುತ್ತಾರೆ.

ಬೆಂಗಳೂರು ನಗರ ವ್ಯಾಪ್ತಿಯ ಕೆಳಕಂಡ 19 ಘಟಕಗಳಲ್ಲಿ ಸಶಸ್ತ್ರ, ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಆರ್.ಎಸ್.ಐ) ಹುದ್ದೆಗಳನ್ನು ಸಶಸ್ತ್ರ, ಪೊಲೀಸ್ ಇನ್ಸ್‌ಪೆಕ್ಟರ್ (ಆರ್.ಪಿ.ಐ) ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸುವಂತೆ ಸಹ ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಘಟಕ | ಕ್ರಮ ಸಂಖ್ಯೆ | ಘಟಕ |
|---|---|---|---|
| 1. | ಡಿಸಿಪಿ, ಸೆಂಟ್ರಲ್ ಎಂ.ಟಿ.ಓ | 11. | ಡಿಸಿಪಿ, ಸಂಚಾರ ಉತ್ತರ ಎಂ.ಟಿ.ಓ |
| 2. | ಡಿಸಿಪಿ, ಪೂರ್ವ ಎಂ.ಟಿ.ಓ | 12. | ಡಿಸಿಪಿ, ಸಂಚಾರ ದಕ್ಷಿಣ ಎಂ.ಟಿ.ಓ |
| 3. | ಡಿಸಿಪಿ, ಪಶ್ಚಿಮ ಎಂ.ಟಿ.ಓ | 13. | ಡಿಸಿಪಿ, ವಿ.ವಿ.ಐ.ಪಿ. ವಿಭಾಗ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಓ |
| 4. | ಡಿಸಿಪಿ, ಆಗ್ನೇಯ ಎಂ.ಟಿ.ಓ | 14. | ಡಿಸಿಪಿ, ಇಂಟೆಲಿಜೆನ್ಸ್ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಓ |
| 5. | ಡಿಸಿಪಿ, ದಕ್ಷಿಣ ಎಂ.ಟಿ.ಓ | 15. | ಡಿಸಿಪಿ, ವಿಧಾನಸೌಧ ಭದ್ರತಾ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಓ |

| | | | |
|---|---|---|---|
| 6. | ಡಿಸಿಪಿ, ಈಶಾನ್ಯ ಎಂ.ಟಿ.ಒ | 16. | ಡಿಸಿಪಿ, ಸಿಟಿ ಕಮಾಂಡ್ ಸೆಂಟರ್ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಒ |
| 7. | ಡಿಸಿಪಿ, ಉತ್ತರ ಎಂ.ಟಿ.ಒ | 17. | ಡಿ.ಜಿ. ಮತ್ತು ಐ.ಜಿ.ಪಿ. ಕಛೇರಿ, ಎಂ.ಟಿ.ಒ |
| 8. | ಡಿಸಿಪಿ, ವೈಟ್‌ಫೀಲ್ಡ್, ಎಂ.ಟಿ.ಒ | 18. | ಬೆಂಗಳೂರು ಮಹಾನಗರ ಕಾರ್ಯಪಡೆ (ಬಿ.ಎಂ.ಟಿ.ಎಫ್) ಎಂ.ಟಿ.ಒ |
| 9. | ಡಿಸಿಪಿ, ಸಂಚಾರ ಪೂರ್ವ ಎಂ.ಟಿ.ಒ | 19. | ಸಿ.ಸಿ.ಬಿ. ಕಛೇರಿ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಒ |
| 10. | ಡಿಸಿಪಿ, ಸಂಚಾರ ಪಶ್ಚಿಮ ಎಂ.ಟಿ.ಒ | | |

ಈ ಹಿನ್ನೆಲೆಯಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಗಳಲ್ಲಿನ 15 ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿನ 19 ಅಂದರೆ ಒಟ್ಟು 34 ಸಶಸ್ತ್ರ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಆರ್.ಎಸ್.ಐ) ಹುದ್ದೆಗಳನ್ನು ಸಶಸ್ತ್ರ ಪೊಲೀಸ್ ಇನ್ಸ್‌ಪೆಕ್ಟರ್ (ಆರ್.ಪಿ.ಐ) ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸುವಂತೆ ಕೋರಿ, ಸದರಿ ಪ್ರಸ್ತಾವನೆಗೆ ಅಂದಾಜು ವಾರ್ಷಿಕ ರೂ.50,75,520/-ಗಳ ಆವರ್ತಕ ವೆಚ್ಚವಾಗುವುದಾಗಿ ತಿಳಿಸಿ, ಪ್ರಸ್ತಾವನೆಗೆ ಮಂಜೂರಾತಿ ಆದೇಶ ನೀಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 136 ಪಿಓಪಿ 2025,**
**ಬೆಂಗಳೂರು, ದಿನಾಂಕ: 25/ಫೆಬ್ರವರಿ/2026.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿವಿಧ ಜಿಲ್ಲಾ ಸಶಸ್ತ್ರ ಮೀಸಲು ಪಡೆಗಳಲ್ಲಿನ 15 ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿನ 19 ಸೇರಿದಂತೆ ಈ ಕೆಳಕಂಡ ಒಟ್ಟು 34 ಸಶಸ್ತ್ರ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಆರ್.ಎಸ್.ಐ) ಹುದ್ದೆಗಳನ್ನು ಸಶಸ್ತ್ರ ಪೊಲೀಸ್ ಇನ್‌ಸ್ಪೆಕ್ಟರ್ (ಆರ್.ಪಿ.ಐ) ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಿದೆ.

**1. ವಿವಿಧ ಜಿಲ್ಲಾ ಸಶಸ್ತ್ರ ಮೀಸಲು ಪಡೆಗಳಲ್ಲಿನ 15 ಹುದ್ದೆಗಳು:**

| ಕ್ರ.ಸಂ | ಘಟಕ | ಕ್ರ.ಸಂ | ಘಟಕ |
|---|---|---|---|
| 1. | ಬಾಗಲಕೋಟೆ | 2. | ಚಾಮರಾಜನಗರ |
| 3. | ಚಿಕ್ಕಬಳ್ಳಾಪುರ | 4. | ದಾವಣಗೆರೆ |
| 5. | ಗದಗ | 6. | ಹಾಸನ |
| 7. | ಹಾವೇರಿ | 8. | ಕೋಲಾರ |
| 9. | ಕೊಪ್ಪಳ | 10. | ಮಂಡ್ಯ |
| 11. | ಮೈಸೂರು | 12. | ರಾಮನಗರ |
| 13. | ಉಡುಪಿ | 14. | ಉತ್ತರ ಕನ್ನಡ |
| 15. | ಯಾದಗಿರಿ | | |

2. ಬೆಂಗಳೂರು ನಗರ ವ್ಯಾಪ್ತಿಯಲ್ಲಿನ 19 ಹುದ್ದೆಗಳು:

| ಕ್ರಮ ಸಂಖ್ಯೆ | ಘಟಕ | ಕ್ರಮ ಸಂಖ್ಯೆ | ಘಟಕ |
|---|---|---|---|
| 1. | ಡಿಸಿಪಿ, ಸೆಂಟ್ರಲ್ ಎಂ.ಟಿ.ಒ | 11. | ಡಿಸಿಪಿ, ಸಂಚಾರ ಉತ್ತರ ಎಂ.ಟಿ.ಒ |
| 2. | ಡಿಸಿಪಿ, ಪೂರ್ವ ಎಂ.ಟಿ.ಒ | 12. | ಡಿಸಿಪಿ, ಸಂಚಾರ ದಕ್ಷಿಣ ಎಂ.ಟಿ.ಒ |
| 3. | ಡಿಸಿಪಿ, ಪಶ್ಚಿಮ ಎಂ.ಟಿ.ಒ | 13. | ಡಿಸಿಪಿ, ವಿ.ವಿ.ಐ.ಪಿ. ವಿಭಾಗ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಒ |
| 4. | ಡಿಸಿಪಿ, ಆಗ್ನೇಯ ಎಂ.ಟಿ.ಒ | 14. | ಡಿಸಿಪಿ, ಇಂಟೆಲಿಜೆನ್ಸ್ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಒ |
| 5. | ಡಿಸಿಪಿ, ದಕ್ಷಿಣ ಎಂ.ಟಿ.ಒ | 15. | ಡಿಸಿಪಿ, ವಿಧಾನಸೌಧ ಭದ್ರತಾ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಒ |
| 6. | ಡಿಸಿಪಿ, ಈಶಾನ್ಯ ಎಂ.ಟಿ.ಒ | 16. | ಡಿಸಿಪಿ, ಸಿಟಿ ಕಮಾಂಡ್ ಸೆಂಟರ್ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಒ |
| 7. | ಡಿಸಿಪಿ, ಉತ್ತರ ಎಂ.ಟಿ.ಒ | 17. | ಡಿ.ಜಿ. ಮತ್ತು ಐ.ಜಿ.ಪಿ. ಕಛೇರಿ, ಎಂ.ಟಿ.ಒ |
| 8. | ಡಿಸಿಪಿ, ವೈಟ್‌ಫೀಲ್ಡ್, ಎಂ.ಟಿ.ಒ | 18. | ಬೆಂಗಳೂರು ಮಹಾನಗರ ಕಾರ್ಯಪಡೆ (ಬಿ.ಎಂ.ಟಿ.ಎಫ್) ಎಂ.ಟಿ.ಒ |
| 9. | ಡಿಸಿಪಿ, ಸಂಚಾರ ಪೂರ್ವ ಎಂ.ಟಿ.ಒ | 19. | ಸಿ.ಸಿ.ಬಿ. ಕಛೇರಿ (ಬೆಂಗಳೂರು ನಗರ ಆಯುಕ್ತಾಲಯ) ಎಂ.ಟಿ.ಒ |
| 10. | ಡಿಸಿಪಿ, ಸಂಚಾರ ಪಶ್ಚಿಮ ಎಂ.ಟಿ.ಒ | | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 472 ವೆಚ್ಚ-11/2025, ದಿನಾಂಕ: 20/02/2026ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
Vanaja K.N.
(ಕೆ.ಎನ್.ವನಜ) 25/2/26
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ).

25/2/2026

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಆಡಿಟ್-II), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2) ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
3) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನಂ.2, ನೃಪತುಂಗ ರಸ್ತೆ, ಬೆಂಗಳೂರು-560001.